# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೆ: ಶ್ರೀ ಎಂಟರ್ ಪ್ರೈಸಸ್ ಏಜೆನ್ಸಿ, ಬೆಂಗಳೂರು ಇವರಿಂದ ಪಡೆದಿರುವ 2 ಗ್ರೂಪ್ 'ಡಿ' ಹುದ್ದೆಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 50 ಎಸ್‌ಪಿಇ 2008, ದಿನಾಂಕ:19.8.2008
2) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 34 ಎಸ್‌ಪಿಇ 2010, ದಿನಾಂಕ:11.5.2010.
3) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಹಿಂಬರಹ ಸಂಖ್ಯೆ:ಸಿಆಸುಇ 230 ಸಿಸೇನಿ 2010, ದಿನಾಂಕ:15.9.2010.
4) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 139 ಎಸ್‌ಪಿಇ 2009, ದಿನಾಂಕ:27.12.2010
5) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 78 ಎಸ್‌ಪಿಇ 2011, ದಿನಾಂಕ:3.12.2012
6) ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 358/ವೆಚ್ಚ-6/2012, ದಿನಾಂಕ:12.6.14.
7) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 33 ಎಸ್‌ಪಿಇ 2012, ದಿನಾಂಕ:2.9.2014.
8) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 78 ಎಸ್‌ಪಿಇ 2011, ದಿನಾಂಕ:17.1.2014.
9) ಮೆ: ಶ್ರೀ ಎಂಟರ್ ಪ್ರೈಸಸ್ ಏಜೆನ್ಸಿ, ಬೆಂಗಳೂರು ಇವರ ಪತ್ರ ದಿನಾಂಕ:1.12.2014.

**ಪ್ರಸ್ತಾವನೆ:**

ರಾಜ್ಯ ಯೋಜನಾ ಮಂಡಳಿಯ ಸಂಶೋಧನಾ ಸಮಾಲೋಚಕರು ಮತ್ತು ಜಂಟಿ ಕಾರ್ಯದರ್ಶಿಗಳ ಆಪ್ತ ಶಾಖೆಗೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಒಂದು ಆಪ್ತ ಸಹಾಯಕರು, ಒಂದು ವಾಹನ ಚಾಲಕರು ಹಾಗೂ ಒಂದು ಗ್ರೂಪ್ – ಡಿ ಹುದ್ದೆಗಳನ್ನು ದಿನಾಂಕ:7.8.2008 ರಿಂದ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿ ಈ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಮೇಲೆ ಓದಲಾದ(1)ರ ಸರ್ಕಾರಿ ಆದೇಶದಲ್ಲಿ ಹೊರಡಿಸಲಾಗಿದೆ. ಸದರಿ ಹುದ್ದೆಗಳನ್ನು ದಿನಾಂಕ:7.8.2010 ರಿಂದ ತಾತ್ಕಾಲಿಕವಾಗಿ ಮತ್ತೆ ಎರಡು ವರ್ಷಗಳ ಅವಧಿಗೆ ಮೇಲೆ ಓದಲಾದ (2) ಸರ್ಕಾರಿ ಆದೇಶದಲ್ಲಿ ಮುಂದುವರೆಸಲಾಗಿರುತ್ತದೆ.

ಎಸ್-3 ಶಾಖೆಯು ಒಂದು ದಲಾಯತ್ ಹುದ್ದೆಯನ್ನು ಯೋಜನಾ ಮಂಡಳಿಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಮೇಲೆ ಓದಲಾದ(3)ರ ಹಿಂಬರಹದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಅನುಮತಿ ನೀಡಿದೆ.

ರಾಜ್ಯ ಯೋಜನಾ ಮಂಡಳಿಯ ಜಂಟಿ ಕಾರ್ಯದರ್ಶಿಗಳ ಆಪ್ತ ಶಾಖೆಯಲ್ಲಿ ಹಾಗೂ ಯೋಜನಾ ಇಲಾಖೆಯ ಎಸ್-3 ಶಾಖೆಯಲ್ಲಿ ಖಾಲಿಯಿರುವ ಒಟ್ಟು ಎರಡು ಗ್ರೂಪ್ 'ಡಿ' ಹುದ್ದೆಗಳಿಗೆ ದಿನಾಂಕ:1.12.2010 ರಿಂದ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಮೆ: ಶ್ರೀ ಎಂಟರ್ ಪ್ರೈಸಸ್, ಬೆಂಗಳೂರು ಇವರಿಗೆ ಮೇಲೆ ಓದಲಾದ (4) ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿರುತ್ತದೆ ಹಾಗೂ ಈ ಅವಧಿಯನ್ನು ಕಾಲ ಕಾಲಕ್ಕೆ ಮುಂದುವರೆಸಿಕೊಂಡು ಬರಲಾಗಿದ್ದು, ದಿನಾಂಕ:3.12.2013 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಮೇಲೆ ಓದಲಾದ (5)ರ ಸರ್ಕಾರಿ ಆದೇಶದಲ್ಲಿ ಸಹ ಮುಂದುವರೆಸಿ ಆದೇಶ ಹೊರಡಿಸಲಾಗಿದೆ. ದಿನಾಂಕ:6.8.2014 ರಿಂದ ಅನ್ವಯವಾಗುವಂತೆ ಮತ್ತೆ ಎರಡು ವರ್ಷಗಳ ಅವಧಿಗೆ ಆಪ್ತ ಸಹಾಯಕ, ವಾಹನ ಚಾಲಕ ಮತ್ತು ಗ್ರೂಪ್-ಡಿ ಹುದ್ದೆಗಳ ಒಂದೊಂದು ಹುದ್ದೆಗಳನ್ನು ಮುಂದುವರೆಸುವ ಪ್ರಸ್ತಾವನೆಗೆ ಅಧಿಕಾರ ಪ್ರತ್ಯಾಯೋಜನೆಯನ್ವಯ ಕ್ರಮ ಕೈಗೊಳ್ಳಬಹುದೆಂದು ಮೇಲೆ ಓದಲಾದ (6)ರ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು ತಿಳಿಸಿದೆ. ಅದರಂತೆ, ದಿನಾಂಕ:7.8.2014 ರಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಮತ್ತೆ ಎರಡು ವರ್ಷಗಳ ಅವಧಿಗೆ ಈ ಹುದ್ದೆಗಳನ್ನು ಮುಂದುವರೆಸಲು ಮೇಲೆ ಓದಲಾದ (7) ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಹೊರ ಗುತ್ತಿಗೆ ಆಧಾರದ ಮೇಲೆ ಈಗಾಗಲೇ ಪಡೆದಿರುವ 2 ಗ್ರೂಪ್ – ಡಿ ಹುದ್ದೆಗಳ ಸೇವೆಯನ್ನು ದಿನಾಂಕ:3.12.2013 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಮೇಲೆ ಓದಲಾದ(8)ರ ಸರ್ಕಾರಿ ಆದೇಶದಲ್ಲಿ ಮುಂದುವರೆಸಲಾಗಿದ್ದು, ಈ ಸರ್ಕಾರಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತು ಹಾಗೂ ನಿಬಂಧನೆ ಮತ್ತು ಅದೇ ಮಾಸಿಕ ಸಂಚಿತ ವೇತನದೊಂದಿಗೆ ಮುಂದಿನ ಒಂದು ವರ್ಷದ ಅವಧಿಗೆ ಎರಡು ಗ್ರೂಪ್ – ಡಿ ಹುದ್ದೆಗಳ ಸೇವೆಯನ್ನು ಮುಂದುವರೆಸುವ ಪ್ರಸ್ತಾವನೆಗೆ ಮೆ: ಶ್ರೀ ಎಂಟರ್ ಪ್ರೈಸಸ್, ಬೆಂಗಳೂರು, ಇವರು ಮೇಲೆ ಓದಲಾದ (9) ರ ಪತ್ರದಲ್ಲಿ ಒಪ್ಪಿಗೆಯನ್ನು ನೀಡಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ:ಪಿಡಿಸಿ 347 ಸೇಅನೇ 2014 ದಿನಾಂಕ:27.11.2014ರ ಆದೇಶದಲ್ಲಿ ಶ್ರೀಮತಿ. ಅಭಿಷಾ ಚೌಧರಿ, ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿ, ಈ ಹುದ್ದೆಯನ್ನು ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಎಂದು ಮರುಪದನಾಮೀಕರಿಸಲಾಗಿದೆ.

ಅದರಂತೆ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಪಿಡಿ 35 ಎಸ್‌ಪಿಬಿ 2014</u>**
**<u>ಬೆಂಗಳೂರು, ದಿನಾಂಕ:30ನೇ ಡಿಸೆಂಬರ್ 2014.</u>**

ರಾಜ್ಯ ಯೋಜನಾ ಮಂಡಳಿಯ ಕಾರ್ಯದರ್ಶಿಗಳ ಆಪ್ತ ಶಾಖೆಯಲ್ಲಿ ಖಾಲಿಇರುವ ಒಂದು ಗ್ರೂಪ್-ಡಿ ಹುದ್ದೆ ಹಾಗೂ ಯೋಜನಾ ಇಲಾಖೆಯ ಎಸ್-3 ಶಾಖೆಯಲ್ಲಿ ಖಾಲಿಇರುವ ಒಂದು ಗ್ರೂಪ್-ಡಿ ಹುದ್ದೆ, ಒಟ್ಟು ಎರಡು ಹುದ್ದೆಗಳನ್ನು ಮೆ: ಶ್ರೀ ಎಂಟರ್ ಪ್ರೈಸಸ್, ನಂ.899, 8ನೇ ಮೈನ್, 3ನೇ ಸ್ಟೇಜ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು-560 079 ಇವರು ಒದಗಿಸಿರುವ ಹೊರಗುತ್ತಿಗೆ ಆಧಾರದ ಸೇವೆಯನ್ನು ದಿನಾಂಕ:31ನೇ ಡಿಸೆಂಬರ್ 2014 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ, ಈ ಹಿಂದಿನ ದಿನಾಂಕ:17.01.2014ರ, ಸರ್ಕಾರಿ ಆದೇಶದನ್ವಯ ಪಡೆಯುತ್ತಿರುವ ಮಾಸಿಕ ಸಂಚಿತ ವೇತನದೊಂದಿಗೆ ಸದರಿ ಆದೇಶದಲ್ಲಿ ವಿಧಿಸಿರುವ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಮುಂದುವರೆಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಸೇವೆ ಸಂಬಂಧಿಸಿದಂತೆ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ಇವರೊಂದಿಗೆ ಕರಾರು ಒಪ್ಪಂದವನ್ನು ಸದರಿ ಸಂಸ್ಥೆಯು ತಕ್ಷಣವೇ ಮಾಡಿಕೊಳ್ಳತಕ್ಕದ್ದು. ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ ಆಯವ್ಯಯ ಲೆಕ್ಕ ಶೀರ್ಷಿಕೆ " 3451-00-101-4-00-059(ಯೋಜನೇತರ) ಇತರ ವೆಚ್ಚಗಳು " ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಹಿಂಬರಹ ಸಂಖ್ಯೆ:ಸಿಆಸುಇ 230 ಸೇಅವಿ 2010 ಹಾಗೂ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 358 ವೆಚ್ಚ-6/2012 ದಿನಾಂಕ:12.8.2014ರ ಸೂಚನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಎಚ್.ಎಸ್. ಉಮಾಧರ ),
ಸರ್ಕಾರದ ಅಧೀನ ಕಾರ್ಯದರ್ಶಿ-3,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:
1) ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ, ವಿಧಾನ ಸೌಧ.
5) ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
6) ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ.
7) ಸರ್ಕಾರದ ಉಪ ಕಾರ್ಯದರ್ಶಿ, ಯೋಜನಾ ಇಲಾಖೆ(ಆಡಳಿತ).
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ.
9) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ(ಆಡಳಿತ-3).
11) ಶ್ರೀ ಎಂಟರ್ ಪ್ರೈಸಸ್, ನಂ.899, 8ನೇ ಕ್ರಾಸ್, 3ನೇ ಸ್ಟೇಜ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂ-79.
12) ಸಹಾಯಕ ಆಡಳಿತಾಧಿಕಾರಿ, ರಾಜ್ಯ ಯೋಜನಾ ಮಂಡಳಿ (ಎಸ್-3).
13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.